# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-800/2016/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:13.3.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರಿ.ಕೆ.ಎಂ.ಶಿವಣ್ಣ ಬಿನ್ ಮುನಿಸ್ವಾಮಿ, ಚಿಕ್ಕುಂಡನಹಳ್ಳಿ ಹುಣಸನಹಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರಿ.ಕೆ.ಎಂ.ಶಿವಣ್ಣ ಬಿನ್ ಮುನಿಸ್ವಾಮಿ, ಚಿಕ್ಕುಂಡನಹಳ್ಳಿ ಹುಣಸನಹಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀ.ಹನುಮಂತರಾಯಪ್ಪ, ತಹಶೀಲ್ದಾರ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ, ಕನಕಪುರ ತಾಲ್ಲೂಕಿನ ಚಿಕ್ಕೊಂಡನಹಳ್ಳಿ ಇಂದ ಹುಣಸೇಪೋಡಿಗೆ ಹೋಗಲು ನಕಾಶೆ ದಾರಿ ಇದ್ದು ಆ ದಾರಿಯನ್ನು ಬಿಡಿಸಿಕೊಡಲು ಜಿಲ್ಲಾಧಿಕಾರಿಗಳಿಗೆ ದಿ; 24.11.2014ರಂದು ಮನವಿ ಸಲ್ಲಿಸಿದೆ. ಜಿಲ್ಲಾದಿಕಾರಿಗಳಿಗೆ 3 ಸಲ ಪತ್ರ ಸಲ್ಲಿಸಿದರೂ ಸಹ ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲ ನಂತರ ಡಿ.ಸಿ ರವರು 7.8.2015ರಂದು ಎ.ಸಿ., ರವರಿಗೆ ಆದೇಶ ನೀಡಿ ಅವರಿಂದ ತಹಶೀಲ್ದಾರ್ ರವರಿಗೆ ನಿರ್ದೇಶನ ಕೊಟ್ಟರೂ ಸಹ ಕ್ರಮ ಕೈಗೊಂಡಿಲ್ಲ ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

3. ಅಪರ ಜಿಲ್ಲಾಧಿಕಾರಿಗಳು ತಹಶೀಲ್ದಾರ್ ರವರಿಗೆ ಖುದ್ದು ಸ್ಥಳ ಪರಿಶೀಲನೆ ಮಾ. ನಿಯಮಾನುಸಾರ ಕ್ರಮ ಕೈಗೊಳುವಂತೆ ಪಾಲನಾ ವರದಿ ಸಲ್ಲಿಸಲು ಕಳುಹಿಸಿರುವ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದಾರೆ.

4. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಚಿಕ್ಕೊಂಡನಹಳ್ಳಿಯಿಂದ ಹುಣಸೇಪೋಡಿಗೆ ಹೋಗಲು ಬಹಳ ಹಿಂದಿನಿಂದಲೂ ನಕಾಶೆ ದಾರಿ ಇದ್ದು ಧನಕರುಗಳು ಓಡಾಡುತ್ತಿದ್ದು ಇತ್ತೀಚೆಗೆ ತಿಮ್ಮರಾಯನದೊಡ್ಡಿಯ ಸುಬ್ರಮಣ್ಯಂ ಇವರು ನಕಾಶೆದಾರಿಯನ್ನು ಮುಚ್ಚಿದ್ದರು ತಾಲ್ಲೂಕು ಮೋಜಣಿದಾರರಿಂದ ಅಳತೆ ಮಾಡಿ ಒತ್ತುವರಿ ಗುರುತಿಸಿ ಸ್ಕೆಚ್‌ನಲ್ಲಿ ತೋರಿಸಿದಂತೆ ಒತ್ತುವರಿದಾರರನ್ನು ತೆರವು ಮಾಡಲಾಗಿದೆ. ನಕಾಶೆ ದಾರಿಯನ್ನು ತೆರವುಗೊಳಿಸಲಾಗಿದೆ ಅಂತ ವರದಿ ಸಲ್ಲಿಸಿದ್ದಾರೆ. ಈ ಬಗ್ಗೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ತಹಶೀಲ್ದಾರ್ ರವರು ಯಾವುದೇ ದಾರಿಯನ್ನು ಬಿಡಿಸಿಕೊಟ್ಟಿಲ್ಲ ನೀವು ಸಚಿವರ ಹತ್ತಿರ ಮತ್ತು ಲೋಕಾಯುಕ್ತಕ್ಕೆ ಹೋದರೂ ಅದು ನಮಗೇ ಬರುತ್ತದೆ. ನಾವು ದಾರಿ ಬಿಡಿಸುವುದಿಲ್ಲ ಅಂತ ಹೇಳಿದ್ದಾರೆ. ವಿ.ಎ., ರವರು ಖಾಲಿ ಹಾಳೆ ಮೇಲೆ ಗ್ರಾಮದ ಜನರ ಸಹಿ ತೆಗೆದುಕೊಂಡಿದ್ದಾರೆ ಅಂತ ಪ್ರತ್ಯುತ್ತರ ಸಲ್ಲಿಸಿದ್ದಾರೆ. ಈ ಪ್ರಕರಣದಲ್ಲಿ ಎಸ್.ಪಿ., ಕಲೋ., ರಾಮನಗರ ಇವರಿಗೆ ಗೌರವಾನ್ವಿತರ ಆದೇಶದಂತೆ ನಿರ್ದೇಶನಕೊಟ್ಟು ನಕಾಶೆ ದಾರಿಯನ್ನು ತೆರವುಗೊಳಿಸಲಾಗಿದೆಯೇ ಎನ್ನುವ ಬಗ್ಗೆ ವರದಿ ಕೇಳಿದಾಗ ಎಸ್.ಪಿ., ರವರು ಸ್ಥಳ ತನಿಖೆ ನಡೆಸಿ ನಕಾಶೆಯಲ್ಲಿರುವ ದಾರಿಯನ್ನು ತೆರವುಗೊಳಿಸಿರುವುದಿಲ್ಲ ಬದಲಾಗಿ ಈ ಸ. ನಂ: 207ರ ಜಮೀನಿನ ಸ್ವಲ್ಪ ಬಾಗದಲ್ಲಿ ಚಂಡು ಹೂ ಮತ್ತು ಟೊಮೇಟೋ ಬೆಳೆ ಇದೆ. ನಕಾಶೆಯಂತೆ ಸದರಿ ಜಮೀನಿನಲ್ಲಿ ಅಂದಾಜು 100 ಮೀ., ರಷ್ಟು ನಕಾಶೆ ದಾರಿ ಬರಬೇಕಾಗಿತ್ತು ಅಂತ ವರದಿ ಸಲ್ಲಿಸಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ಚಿಕ್ಕೊಂಡನಹಳ್ಳಿ ಗ್ರಾಮದಿಂದ ಹುಣಸೇಪೋಡಿಗೆ ಇರುವ ನಕಾಶೆದಾರಿಯನ್ನು ತೆರವುಗೊಳಿಸದೆ ಅದನ್ನು ತೆರವುಗೊಳಿಸಲಾಗಿದೆ ಅಂತ ಸುಳ್ಳುವರದಿ ಸಲ್ಲಿಸಿರುವುದು ತನಿಖೆಯಿಂದ ಸಾಬೀತಾಗಿದೆ ಎದುರುದಾರರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿದ್ದಾರೆ.

6. ಸ. ನಂ: 127ಕ್ಕೆ ಸಂಬಂಧಿಸಿದ ಪಹಣಿಯಲ್ಲಿ ಪೋಟ್ ಖರಾಬ್ 'ಎ' 0.12 ಗು., ಮತ್ತು ಪೋಟ್ ಖರಾಬ್ 'ಬಿ' 0.07ಗು., ಅಂತ ನಮೂದಿಸಿರುವುದರಿಂದ ನಕ್ಷೆ ಕಂಡ ದಾರಿಯನ್ನು ತೆರವುಗೊಳಿಸಿಕೊಡುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/2/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.